ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಕೆ.ಆರ್.ವೃತ್ತ, ಬೆಂಗಳೂರು-560 001.
ದೂರವಾಣಿ: 91-080-22212408.
ಫ್ಯಾಕ್ಸ್ : 91-080-22277528.

ಸಂಖ್ಯೆ:ತಾಂ.ಆಡಳಿತ.ಪ.ಭೂ.17/09-10 ದಿನಾಂಕ: 26-8-2009

## ಸುತ್ತೋಲೆ

**ವಿಷಯ:** 11ಇ ಅರ್ಜಿಯಲ್ಲಿ ಕೋರಿದ ವಿಸ್ತೀರ್ಣವು ಅಳತೆ ವೇಳೆ ಬದಲಾವಣೆಯಾದಾಗ ಅನುಸರಿಸಬೇಕಾದ ಕ್ರಮ.

**ಉಲ್ಲೇಖ:** ಮಧುಗಿರಿ ತಾಲ್ಲೂಕಿನ ರೈತರ ಮನವಿ ದಿ:13-7-2009.

★★★

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ರೈತರು ಮಧುಗಿರಿ ತಾಲ್ಲೂಕಿನ ಭೂಮಾಪನ ಶಾಖೆಯಲ್ಲಿ (ಮ್ಯುಟೇಷನ್ ಪೂರ್ವ ನಕ್ಷೆ) 11ಇ ನಕ್ಷೆ ಕೋರಿ ಅರ್ಜಿ ಸಲ್ಲಿಸಲು ಹೋದಾಗ ಅರ್ಜಿ ಜೊತೆಯಲ್ಲಿ ವಿಭಾಗ ಪತ್ರವನ್ನು ಸಹ ಸಲ್ಲಿಸುವಂತೆ ಕಛೇರಿ ಸಿಬ್ಬಂದಿಯವರು ಒತ್ತಾಯಿಸುತ್ತಿರುವ ಬಗ್ಗೆ ಪ್ರಸ್ತಾಪಿಸಿ ಇದರಿಂದ ರೈತರಿಗೆ ಆಗುತ್ತಿರುವ ತೊಂದರೆಯನ್ನು ವಿವರಿಸಿರುತ್ತಾರೆ. ಅಳತೆ ಪೂರ್ವದಲ್ಲೇ ವಿಭಾಗ ಪತ್ರ ಸಲ್ಲಿಸಿದ್ದಲ್ಲಿ ವಿಭಾಗ ಪತ್ರದಲ್ಲಿನ ವಿಸ್ತೀರ್ಣಕ್ಕೂ ಹಾಗೂ ಅಳತೆ ನಂತರ ಬರುವ ವಿಸ್ತೀರ್ಣಕ್ಕೂ ಹೆಚ್ಚು ಕಡಿಮೆ ಆಗುತ್ತದೆ ಎಂದು ಒಂದು ಸರ್ವೆ ನಂಬರಿನಲ್ಲಿ ಅಣ್ಣ ತಮ್ಮಂದಿರುಗಳು ವಿಭಾಗ ಮಾಡಿಕೊಂಡಾಗ ಒಬ್ಬೊಬ್ಬರಿಗೆ ಎರಡು ಅಥವಾ ಮೂರು ಕಡೆ ಭಾಗಗಳಾದಾಗ ವಿಭಾಗ ಪತ್ರದಲ್ಲಿನ ವಿಸ್ತೀರ್ಣಕ್ಕೂ/ಅಳತೆ ನಂತರದ ವಿಸ್ತೀರ್ಣಕ್ಕೂ ವ್ಯತ್ಯಾಸವಾಗುತ್ತದೆ. ಇದರಿಂದಾಗಿ ಅಳತೆಯ ಪೂರ್ವದಲ್ಲಿ ಹಾಗೂ ನಂತರ ಎರಡು ಬಾರಿ ವಿಭಾಗ ಪತ್ರವನ್ನು ಸಲ್ಲಿಸಬೇಕಾಗುವುದರಿಂದ, ರೈತರಿಗೆ ಅನಾವಶ್ಯಕವಾಗಿ ಆರ್ಥಿಕ ಹೊರೆಯಾಗಿ ತೊಂದರೆ ಉಂಟಾಗುವುದಲ್ಲದೆ, ವಿಸ್ತೀರ್ಣ ವ್ಯತ್ಯಾಸವಾದಲ್ಲಿ ಸರಿಪಡಿಸಲು ಪಾಲುದಾರರು ಕೆಲವು ಬಾರಿ ಒಪ್ಪುವುದಿಲ್ಲವೆಂದು ತಿಳಿಸಿ, ನೋಂದಣಿ ವಿಭಾಗ ಪತ್ರಕ್ಕೆ ಕೋರಿ ಅರ್ಜಿ ಸಲ್ಲಿಸುವಾಗ ವಿಭಾಗ ಪತ್ರಕ್ಕೆ ಒತ್ತಾಯಿಸದೇ ಇರಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ರೈತರ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ, ಅಳತೆ ಪೂರ್ವದಲ್ಲಿ ನಮೂದಿಸಿರುವ ವಿಸ್ತೀರ್ಣಕ್ಕೂ ಮತ್ತು ಅಳತೆಯ ನಂತರ ಬರುವ ವಿಸ್ತೀರ್ಣ ಬದಲಾಗುವ ಸಾಧ್ಯತೆಗಳಿದ್ದು, ಇಂತಹ ಪ್ರಸಂಗಗಳಲ್ಲಿ ಈ ಕೆಳಕಂಡ ಸೂಚನೆಗಳಂತೆ ಕಾರ್ಯ ನಿರ್ವಹಿಸಲು ಸೂಚಿಸಿದೆ.

1. ಕ್ರಯ, ವಿಭಾಗ, ವಾರಸು ಮತ್ತು ತತ್ಸಂಬಂಧ ಪ್ರಕರಣಗಳಲ್ಲಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳನ್ನು/ಕಛೇರಿಯಲ್ಲಿ ಪರಿಶೀಲಿಸಬೇಕಾದ ಅಂಶಗಳ ಬಗ್ಗೆ ಈ ಕಾರ್ಯಾಲಯದ ಸುತ್ತೋಲೆ ಸಂ.ತಾಂತ್ರಿಕ.ಆಡಳಿತ. ಪ.ಭೂ.12 /2009-10, ದಿ: 20.8.2009 ರಲ್ಲಿ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.

2. 11ಇ ನಕ್ಷೆ ಕೋರಿ ಬರುವ ಕ್ರಯ, ವಿಭಾಗ, ವಾರಸು ಪ್ರಕರಣಗಳಲ್ಲಿ ಅರ್ಜಿಯಲ್ಲಿ ನಮೂದಿಸಿರುವ ವಿಸ್ತೀರ್ಣ ಮತ್ತು ಅಳತೆಯ ನಂತರದ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಉಂಟಾಗಲು ಸಾಧ್ಯವಿರುತ್ತದೆ. ಅಳತೆಯ ಸಮಯದಲ್ಲಿ ನಿರ್ಧಾರವಾಗುವ ವಿಸ್ತೀರ್ಣವನ್ನು ಅಂದರೆ ಅರ್ಜಿಯಲ್ಲಿ ಸಲ್ಲಿಸಿದ್ದ ವಿಸ್ತೀರ್ಣ ಅಳತೆ ಸಮಯದಲ್ಲಿ ಬದಲಾಗಿದ್ದಲ್ಲಿ, ಆ ರೀತಿ ಬದಲಾದ ವಿಸ್ತೀರ್ಣವನ್ನು "ಮೋಜಣಿ" ತಂತ್ರಾಂಶದ ಮೂಲಕ ನಕ್ಷೆಯ ವಿವರಗಳಲ್ಲಿ ದಾಖಲು ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

3. ಅಳತೆಯ ನಂತರ ದಾಖಲಿಸುವ ಬದಲಾದ ವಿಸ್ತೀರ್ಣವು ಸಂಬಂಧಿಸಿದ ಹಕ್ಕುದಾರರಿಗೆ ಆರ್.ಟಿ.ಸಿ.ಯಲ್ಲಿನ ಕಾಲಂ 9 ರಲ್ಲಿ ನಮೂದಿಸಲಾಗಿರುವ ಹಕ್ಕಿನ ವಿಸ್ತೀರ್ಣವನ್ನು ಮೀರದಂತೆ ಎಚ್ಚರ ವಹಿಸುವುದು.

4. ಅರ್ಜಿಯಲ್ಲಿ ದಾಖಲಿಸಿರುವ ವಿಸ್ತೀರ್ಣ ಮತ್ತು ಅಳತೆಯ ಸಮಯದಲ್ಲಿ ನಿರ್ಧಾರ ಮಾಡಲ್ಪಟ್ಟ ವಿಸ್ತೀರ್ಣಗಳಲ್ಲಿ ವ್ಯತ್ಯಾಸವಿದ್ದಲ್ಲಿ ಈ ಬಗ್ಗೆ ಅಳತೆ ಸಮಯದಲ್ಲಿ ಅರ್ಜಿದಾರರಿಗೆ ಸಂಪೂರ್ಣವಾದ ಮತ್ತು ನಿಖರವಾದ ಮಾಹಿತಿ ನೀಡಿ, ಒಪ್ಪಿಗೆ ಇರುವ ಬಗ್ಗೆ ಮಹಜರ್‌ನಲ್ಲಿ ಕಡ್ಡಾಯವಾಗಿ ದಾಖಲಿಸಿ ಸಹಿ ಪಡೆಯಬೇಕು.

5. 11ಇ ನಕ್ಷೆ ಕೋರಿ ಬರುವ ವಿಭಾಗ ಪ್ರಕರಣಗಳಲ್ಲಿ ಅಳತೆಯ ನಂತರ ಬದಲಾದ ವಿಸ್ತೀರ್ಣಕ್ಕೆ ಹೊಸ ಅರ್ಜಿ, ಹೊಸ ವಿಭಾಗ ಪತ್ರ ಪಡೆಯುವ ಅವಶ್ಯಕತೆ ಇರುವುದಿಲ್ಲ. ಈ ಬಗ್ಗೆ ಅರ್ಜಿ ಸಲ್ಲಿಸುವಾಗ ಇದ್ದ ವಿಸ್ತೀರ್ಣವು ಅಳತೆ ಸಮಯದಲ್ಲಿ ವ್ಯತ್ಯಾಸವಾದ ಬಗ್ಗೆ ವಿವರಗಳನ್ನು ಮಹಜರ್‌ನಲ್ಲಿ ದಾಖಲಿಸಿರುವುದನ್ನು ಹಾಗೂ ಈ ಬಗ್ಗೆ ಸಂಬಂಧಿಸಿದ ಎಲ್ಲರ ಒಪ್ಪಿಗೆ ಇರುವುದನ್ನು ಖಚಿತಪಡಿಸಿಕೊಂಡು 11ಇ ನಕ್ಷೆಗಳನ್ನು ದೃಡೀಕರಿಸಿ ವಿತರಿಸಲು ಸೂಚನೆ ನೀಡಲಾಗಿದೆ. ಅಳತೆ ವೇಳೆಯಲ್ಲಿ ನಿರ್ಧರಿಸಲಾದ ವಿಸ್ತೀರ್ಣಕ್ಕೆ ಎಲ್ಲರೂ ಒಪ್ಪದಿದ್ದಲ್ಲಿ 11ಇ ನಕ್ಷೆಯನ್ನು ಅರ್ಜಿಯಲ್ಲಿ ತಿಳಿಸಿರುವಂತೆ ತಯಾರಿಸುವುದು ಅಥವಾ ಅರ್ಜಿಯನ್ನು 11ಇ ನಕ್ಷೆ ತಯಾರಿಸದೇ ವಿಲೆ ಇಡುವುದು.

6. ಉಯಿಲು ಪತ್ರ (Will) ಮೇರೆಗೆ 11ಇ ನಕ್ಷೆ ತಯಾರಿಸಬೇಕಾದಲ್ಲಿ, ಉಯಿಲು ಪತ್ರದಲ್ಲಿ ನಮೂದಾಗಿರುವ ವಿಸ್ತೀರ್ಣಕ್ಕೆ ನಕ್ಷೆ ತಯಾರಿಸಬೇಕು. ಉಯಿಲು ಪತ್ರದ ವಿಸ್ತೀರ್ಣಕ್ಕೆ ಎಲ್ಲಾ ಹಕ್ಕುದಾರರು ಒಪ್ಪದೇ ಇದ್ದಲ್ಲಿ ಪ್ರಕರಣವನ್ನು ನಕ್ಷೆ ತಯಾರಿಸದೇ ವಿಲೆ ಇಡುವುದು.

7. ಅನುವಂಶಿಕ ಆಸ್ತಿ ಸಂಬಂಧ ವಿಭಾಗ ಮಾಡಿಕೊಳ್ಳಲು 11ಇ ನಕ್ಷೆ ಕೋರಿ ಅರ್ಜಿ ಸಲ್ಲಿಸಿದಲ್ಲಿ ಅರ್ಜಿ ಸಲ್ಲಿಸಿದ ವ್ಯಕ್ತಿ ಮತ್ತು ಅವರ ಎಲ್ಲಾ ರಕ್ತ ಸಂಬಂಧಿಗಳನ್ನು ಒಳಗೊಂಡ ವಂಶವೃಕ್ಷವನ್ನು ಅರ್ಜಿಯೊಂದಿಗೆ ಹಾಜರುಪಡಿಸಬೇಕು ಹಾಗೂ ಎಲ್ಲಾ ಹಕ್ಕುದಾರರು ತಾವು ಪಡೆಯಲು ಉದ್ದೇಶಿಸಿರುವ ವಿಸ್ತೀರ್ಣದ ಬಗ್ಗೆ ಒಪ್ಪಿ ಸಿದ್ಧಪಡಿಸಿರುವ ಒಪ್ಪಿಗೆ ಪತ್ರವನ್ನು ಹಾಜರುಪಡಿಸಬೇಕು. ಅಳತೆ ಸಮಯದಲ್ಲಿ ವಂಶವೃಕ್ಷದಲ್ಲಿರುವ ಹಕ್ಕುದಾರರ ನಡುವೆ ವಿಸ್ತೀರ್ಣದ ಸಂಬಂಧ ಭಿನ್ನಾಭಿಪ್ರಾಯ ಉಂಟಾದಲ್ಲಿ ಹೊಸದಾಗಿ ಅಳತೆ ಸಮಯದಲ್ಲಿ ನಿರ್ಧಾರವಾಗುವ ವಿಸ್ತೀರ್ಣಕ್ಕೆ ವಂಶವೃಕ್ಷದಲ್ಲಿ ನಮೂದಾದ ಎಲ್ಲಾ ಹಕ್ಕುದಾರರು ಒಪ್ಪಿದಲ್ಲಿ ಅದರಂತೆ ನಕ್ಷೆ ತಯಾರಿಸಿ, ಮಹಜರ್‌ನೊಂದಿಗೆ ಕಡತ ಕಛೇರಿಗೆ ಹಿಂದಿರುಗಿಸುವುದು ಹಾಗೂ ಒಪ್ಪದೇ ಇದ್ದಲ್ಲಿ ನಕ್ಷೆ ತಯಾರಿಸದೇ ಪರವಾನಗಿ ಭೂಮಾಪಕರು ಕಡತ ಕಛೇರಿಗೆ ಹಿಂದಿರುಗಿಸುವುದು ಹಾಗೂ ಕಛೇರಿಯಲ್ಲಿ ಕಡತ ವಿಲೇ ಇಡುವುದು. ಅಳತೆ ಮೂಲಕ ನಕ್ಷೆ ತಯಾರಿಸಿ ಸಲ್ಲಿಸಿದ ನಂತರ ಕಛೇರಿಯಲ್ಲಿ ಎಲ್ಲಾ ವಂಶವೃಕ್ಷದ ಅನುವಂಶಿಕ ಹಕ್ಕುದಾರರ ಒಪ್ಪಿಗೆಯ ಬಗ್ಗೆ ವಂಶವೃಕ್ಷದ ಮೂಲಕ ಮತ್ತೊಮ್ಮೆ ಪರಿಶೀಲಿಸುವುದು ಹಾಗೂ ಅಳತೆ ಸಮಯದಲ್ಲಿ ವಿವಾದಗಳು ಇಲ್ಲದೇ ಇದ್ದ ಅಂಶವನ್ನು ಮಹಜರ್‌ನಲ್ಲಿ ದಾಖಲಿಸಲಾಗಿದೆಯೇ ಎಂಬುದನ್ನು ಸಹ ಪರಿಶೀಲಿಸುವುದು.

ಮತ್ತೊಂದು ಪ್ರಮುಖ ಅಂಶವೆಂದರೆ, ಅರ್ಜಿದಾರರಿಗೆ ಎಲ್ಲಾ ಹಕ್ಕುದಾರರು ತಮ್ಮ ಸಂಬಂಧಿಗಳೇ ಆದ ಕಾರಣ, ಎಲ್ಲರ ವಿಳಾಸವನ್ನು ಒದಗಿಸಲು ಸಾಧ್ಯವಾಗುವುದರಿಂದ ತಪ್ಪದೇ ಅರ್ಜಿಯಲ್ಲಿ ವಿಳಾಸಗಳನ್ನು ಒದಗಿಸುವಂತೆ ಸೂಚಿಸುವುದು.

24/8

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು
26.8.09

<u>ಪ್ರತಿಯನ್ನು:-</u>

1. ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ, ಮೈಸೂರು/ಗುಲ್ಬರ್ಗಾ ರವರಿಗೆ ಮಾಹಿತಿಗಾಗಿ
6. ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ಸಂಘ, ಬೆಂಗಳೂರು.
8. ಅಧ್ಯಕ್ಷರು, ಕರ್ನಾಟಕ ರಾಜ್ಯದ ಪರವಾನಗಿ ಭೂಮಾಪಕರ ಸಂಘ, ಮಹಾವೀರ ಕಾಂಪ್ಲೆಕ್ಸ್, ಕೆ.ಜಿ. ರೋಡ್, ಬೆಂಗಳೂರು